**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 07.07.2021.

**1] ಮಹಿಳಾ ಪೊಲೀಸ ಠಾಣೆ ಗುನ್ನೆ ನಂ: 78/2021 ಕಲಂ: ಮಹಿಳೆ ಕಾಣೆ**

ದಿನಾಂಕ: 02.07.2021 ರಂದು 21.00 ಗಂಟೆ ಸುಮಾರಿಗೆ ಇದರಲ್ಲಿಯ ಕಾಣೆಯಾದ ಶಾಹಿನ್ ತಂದೆ ದಸ್ತಗೀರಸಾಬ ಮುದ್ದೇಬಿಹಾಳ ರಹಿಮ್ ನಗರ, ಉರ್ದು ಅಲಸನಾತ್ ಸ್ಕೂಲ್ ಹಿಂದೆ ವಿಜಯಪುರ ಇವಳು ವಿಜಯಪುರದ ಕನ್ನೂರ ಆಸ್ಪತ್ರೆಯಲ್ಲಿ ಒಂದುವರೆ ವರ್ಷದಿಂದ ನರ್ಸ ಕೆಲಸ ಮಾಡುತ್ತಿದ್ದು, ಎಂದಿನಂತೆ ಆಸ್ಪತ್ರೆಗೆ ಕೆಲಸಕ್ಕೆ ಹೋಗಿದ್ದು ರಾತ್ರಿ 10:00 ಗಂಟೆ ಆದರು ಮರಳಿ ಮನೆಗೆ ಬರದೆ ಇದ್ದಾಗ ಫೋನ ಮಾಡಿ ಆಸ್ಪತ್ರೆಯ ಸಿಬ್ಬಂದಿಗೆ ವಿಚಾರಿಸಿದ್ದು, ಶಾಹಿನ್ ಇವಳು ರಾತ್ರಿ 9.30 ಗಂಟೆಗೆ ಕೆಲಸ ಮುಗಿಸಿಕೊಂಡು ಮನೆಗೆ ಹೋಗುವದಾಗಿ ಹೇಳಿ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾಳೆ. ಈ ಬಗ್ಗೆ ದಸ್ತಗೀರಸಾಬ ತಂದೆ ಚಂದಾಸಾಬ ಮುದ್ದೇಬಿಹಾಳ ಸಾ॥ ರಹಿಮ್ ನಗರ, ಉರ್ದು ಅಲಸನಾತ್ ಸ್ಕೂಲ್ ಹಿಂದೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 06.07.2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಬಬಲೇಶ್ವರ ಪೊಲೀಸ ಠಾಣೆ ಗುನ್ನಾ. ನಂ: 93/2021 ಕಲಂ: 87 ಕೆ.ಪಿ.ಆ್ಯಕ್ಟ್**

ದಿನಾಂಕ; 06.07.2021 ರಂದು 14.25 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1) ನಜೀರ್ ಕರೀಮಸಾಬ ಬೇಪಾರಿ ಸಾ: ಗೋಠೆ ತಾ: ಜಮಖಂಡಿ. 2) ಸಂತೋಷ ಈರಪ್ಪ ಕಟಗಿ ಸಾ: ನಾಗರಾಳ ತಾ:ಬಬಲೇಶ್ವರ. 3) ಸಿದ್ದು ಶಂಕರ ಕಾಂಬಳೆ ಸಾ: ಯಕ್ಕುಂಡಿ. 4) ರಫೀಕ್ ದಾವಲಸಾಬ ಮುಜಾವರ ಸಾ: ಕಲಬೀಳಗಿ ತಾ: ಜಮಖಂಡಿ. 5) ಶಂಕರ ವಿಠ್ಠೋಭಾ ಸಲಗರ ಸಾ: ಕಲಬೀಳಗಿ ತಾ: ಜಮಖಂಡಿ. 6) ಚಿಕ್ಕಯ್ಯಾ ಪ್ರಲ್ಹಾದ ತಳಕೇರಿ ಸಾ: ಸಾವಳಗಿ. 7) ಹಣಮಂತ ದ್ಯಾನುಬಾ ಈರಕರ ಸಾ: ಕಲಬೀಳಗಿ. 8) ಮಲ್ಲಪ್ಪ ಸಿದ್ದಪ್ಪ ನಾವಿ ಸಾ: ಯಕ್ಕುಂಡಿ ತಾ; ಬಬಲೇಶ್ವರ. ಇವರು ವಿಜಯಪೂರ ಜಿಲ್ಲೆಯ ಬಬಲೇಶ್ವರ ತಾಲೂಕಿನ ನಿಡೋಣಿ ಗ್ರಾಮದಿಂದ ಕುಮಠೆ ಗ್ರಾಮದ ಕಡೆಗೆ ಹೋಗುವ ಸಾರ್ವಜನಿಕ ರಸ್ತೆಯ ಪಕ್ಕದಲ್ಲಿ ಚನ್ನಪ್ಪ ಮಮದಾಪೂರ ಇವರ ಜಮೀನದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಕುಳಿತು ತಮ್ಮ ತಮ್ಮ ಫಾಯಿದೆಗೋಸ್ಕರ ಇಸ್ಪಿಟ್ ಎಲೆಗಳ ಸಹಾಯದಿಂದ ಪಣಕ್ಕೆ ಹಣ ಕಟ್ಟಿ ಅಂದರ ಬಾಹರ್ ಅನ್ನುವ ಇಸ್ಪೀಟ್ ಜೂಜಾಟ ಆಡುತ್ತಿದ್ದಾಗ ಸಿಕ್ಕಿದ್ದು ಇರುತ್ತದೆ. ಜಪ್ತಾದ ಮಾಲುಗಳಾದ 1) 52 ಇಸ್ಪೀಟ್ ಎಲೆಗಳು. ಅಂದಾಜ ಕಿಮ್ಮತ್-00 ರೂ. 2) ರೋಖ ಹಣ 16500/- ರೂಗಳು. ಈ ಬಗ್ಗೆ ಸ:ತ: ಸೋಮನಗೌಡ. ಬಿ. ಗೌಡ್ರ ಪಿ.ಎಸ್.ಐ ಬಬಲೇಶ್ವರ ಪಿಎಸ್. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 06.07,2021 ರಂದು ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 188/2021 ಕಲಂ: ಮಹಿಳೆ ಕಾಣೆ.**

ದಿನಾಂಕ: 08.06.2021 ರಂದು 00.00 ಗಂಟೆಯಿಂದ 0700 ಗಂಟೆಯ ನಡುವೆ ಇದರಲ್ಲಿ ಕಾಣೆಯಾದ ರವೀನಾ ಗಂ ರಮೇಶ ಚವ್ಹಾಣ ವಯಾ 20 ವರ್ಷ ಸಾ॥ ಮಖಣಾಪೂರ ತಾಂಡಾ ನಂ 1 ಇವಳು ಪಿರ್ಯಾದಿಯ ವಿಜಯಪೂರ ಎಮ್‌ಸಿ ಹತ್ತರದ ನಾಗರಬಾವಡಿ ತೋಟದ ಹತ್ತಿರ ಇರುವ ಮನೆಯಿಂದ ಮನೆಯಲ್ಲಿ ಎಲ್ಲರೂ ಮಲಗಿದಾಗ ಮನೆಯಲ್ಲಿ ಯಾರಿಗೂ ಹೇಳದೆ ಕೇಳದೆ ಎಲ್ಲಿಗೋ ಹೋಗಿ ಕಾಣೆ ಆಗಿದ್ದು ಇರುತ್ತದೆ ಈ ಬಗ್ಗೆ ರಾಜು ಸೀತಾರಾಮ ರಜಪೂತ ಸಾ॥ ತೊರವಿ ತಾಂಡಾ ಹಾಲಿ ವಿಜಯಪೂರ ಎಎಮ್‌ಸಿ ಹತ್ತಿರ ನಾಗರವಾಡಿ ತೋಟದ ಹತ್ತಿರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 06.07,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 189/2021 ಕಲಂ: ಮಹಿಳೆ ಕಾಣೆ**

ದಿನಾಂಕ: 01.07.2021 ರಂದು ಸಾಯಂಕಾ 04:00 ಗಂಟೆ ಸುಮಾರಿಗೆ ಇದರಲ್ಲಿ ಕಾಣೆಯಾದ ಸುಪ್ರೀಯಾ ಗಂಡ ಸಂಜು ಚವ್ಹಾಣ ಉ: ಮನೆಗೆಲಸ ವಯಾ 22 ವರ್ಷ ಸಾ॥ ಮಖಣಾಪೂರ ತಾಂಡಾ ನಂ 1 ಇವಳು ತನ್ನ ತಂಧೆ ಮನೆಯಿಂದ ತಾಂಡಾದಲ್ಲಿ ಕಿರಾಣಿ ಅಂಗಡಿಗೆ ಹೊಗಿ ಬರುತ್ತೇನೆ ಅಂತಾ ಮನೆಯಿಂದ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾಳೆ ಈ ಬಗ್ಗೆ ಸಂಜು ದೇಸು ಚವ್ಹಾಣ ಸಾ। ಮಖಣಾಪೂರ ತಾಂಡಾ ನಂ 1 ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 06.07,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.